ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
**KARNATAKA STATE FINANCIAL CORPORATION**
Established under the State Financial Corporations' Act, 1951

भारतीय मानक ब्यूरो IS / ISO 9001:2008
Bureau of Indian Standards QMS

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./ ED-II/Secy/136/2018-19

ದಿನಾಂಕ :
Date 21-03-2019

## INTER OFFICE NOTE

Sub:- Sanction of Term Loan/s with 10% Interest Subsidy/Subvention for New & Existing Micro & Small Manufacturing Enterprises.

Ref:- *i)* ಸರ್ಕಾರಿ ಆದೇಶ ಸಂಖ್ಯೆ:ಸಿಐ:20:ಸಪ್ರಕ್ರೈ:2018, ಬೆಂಗಳೂರು ದಿನಾಂಕ:26-09-2018.
*ii)* KSFC Circular no 1005 dtd 06/10/2018.
*iii)* KSFC IoN no 91 dtd 04/12/2018.
*iv)* KSFC IoN no 102 dtd 05/01/2019.
*v)* ಸರ್ಕಾರಿ ಪತ್ರ ಸಂಖ್ಯೆ:ಕೈವಾಇ/ಎಂಎಸ್ಎಂಇ/ಕೈ.ವಿ.ಅ1/ಸಧಬ/16/18-19 ದಿನಾಂಕ:18-03-2019.

Consequent to introduction of Interest Subvention Scheme of Government of Karnataka vide reference i) above, the existing scheme for First Generation Entrepreneurs *(Circular 913 dtd 01/06/2015)* was withdrawn & the loan/s sanctioned before 25/09/2018 continued to get the benefits already availed as per the First Generation Entrepreneurs scheme for these loan/s. There was an ambiguity whether these entrepreneurs will be eligible to get the benefits of availing loan/s for expansion/ modernization/ diversification & technology upgradation of their enterprises under the Interest Subvention Scheme.

It is now clarified by the Government of Karnataka vide reference *v)* above that those Entrepreneurs who had availed loan/s from the Corporation under the First Generation Entrepreneurs Scheme *(Circular 913 dtd 01/06/2015)* & have successfully implemented their projects, will be eligible to avail additional loan/s towards further investments on construction of Building, acquisition of additional Plant & Machinery for expansion/ modernization/ diversification & technology upgradation of their existing enterprises under the 10% Interest Subvention Scheme of Government of Karnataka. A copy of the letter is enclosed herewith for reference.

It may please be noted that such additional loan/s sanctioned to these entrepreneurs, including earlier loan/s sanctioned shall be within the overall limits of Rs. 500 lakh for MSEs engaged in manufacturing & Rs 200 lakh for MSEs engaged in manufacturing and allied services. Further, the upper limit of gross block of plant & machinery, eligibility criteria & other terms and conditions of the Interest Subvention Scheme of Government of Karnataka remain unaltered.

EXECUTIVE DIRECTOR - II

To:
All Branch Managers, IA Cells
All Section Heads in HO,
All General Managers, O/o MD
Executive Director-I - *for information*

ಕರ್ನಾಟಕ ಸರ್ಕಾರ
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

DIRECTORATE MICRO, SMALL & MEDIUM ENTERPRISES
No.49, 1st Floor, South Block
Khanija Bhavan, Race Cource Road,
Bangalore – 560001
☎ : 22386792 , Fax: : 22389907
e-mail: commissioner-msme@karnatakaindustry.gov.in

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ದೇಶನಾಲಯ
ನಂ.49, 1ನೇ ಮಹಡಿ, ಸೌತ್ ಬ್ಲಾಕ್,
ಖನಿಜ ಭವನ, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು – 560 001
☎:22386792, ಫ್ಯಾಕ್ಸ್:22389907

ಸಂಖ್ಯೆ:ಕೈವಾಇ/ಎಂಎಸ್‌ಎಂಇ/ಕೈ.ವಿ.ಅ1/ಸಧಬಿ/16/18–19 ದಿನಾಂಕ: **18/03/2019**

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
ಬೆಂಗಳೂರು

ಮಾನ್ಯರೆ,

ವಿಷಯ: ಶೇ10% ಬಡ್ಡಿ ಸಹಾಯಧನ ಯೋಜನೆಯ ಅನ್ವಯ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂ.ಸಿಐ 20 ಸಪ್ರಕ್ಯೆ 2018 ಬೆಂಗಳೂರು ದಿನಾಂಕ: 26/9/2019
2. ತಮ್ಮ ಪತ್ರ ಸಂ.KSFC/HO/ED-II/2018-19/Secy/113/c Dt:15/2/2019
3. ಸರ್ಕಾರದ ಪತ್ರ ಸಂ.ಸಿಐ 20 ಸಪ್ರಕ್ಯೆ 2018 ಬೆಂಗಳೂರು ದಿನಾಂಕ: 13/03/2019

***

ಉಲ್ಲೇಖ (1) ರನ್ವಯ ಸರ್ಕಾರವು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಹೊಸ ಹೂಡಿಕೆಗಾಗಿ ಸಾಲ ಪಡೆದು ಸ್ಥಾಪನೆಗೊಳ್ಳುವ ಹೊಸ ಮತ್ತು ಅಸ್ತಿತ್ವದಲ್ಲಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿಸ್ತರಣೆಗೆ, ಆಧುನೀಕರಣ / ವೈರುದ್ಧೀಕರಣ / ತಾಂತ್ರಿಕ ಉನ್ನತೀಕರಣ ಶೇ 10% ಬಡ್ಡಿ ಸಹಾಯಧನ ಯೋಜನೆಯನ್ನು ಜಾರಿಗೆ ತಂದಿರುತ್ತದೆ.

ತಾವು ಉಲ್ಲೇಖ (2) ರನ್ವಯ ಮಾರ್ಗಸೂಚಿಯ ಯೋಜನೆ ಅನ್ವಯ ಕಂಡಿಕೆ 4 ಮತ್ತು 5 ರ ಪ್ರಕಾರ "ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಹೊಸ ಪೀಳಿಗೆಯ ಉದ್ಯಮಶೀಲರಿಗೆ ಈ ಯೋಜನೆಯಡಿಯಲ್ಲಿ ವಿಸ್ತರಣೆ / ಆಧುನೀಕರಣ / ವೈರುದ್ಧೀಕರಣ / ತಾಂತ್ರಿಕ ಉನ್ನತೀಕರಣ ಮೂಲಕ ಕಟ್ಟಡ ಮತ್ತು ಯಂತ್ರೋಪಕರಣಗಳಲ್ಲಿ ಹೂಡಿಕೆಗಾಗಿ ಸಾಲ ಪಡೆಯುವ ಅವಕಾಶವಿರುವುದಿಲ್ಲ. ಆದ್ದರಿಂದ ಅವರಿಗೂ ಈ ಯೋಜನೆ ಅನ್ವಯಿಸುವಂತೆ ಅನುಮೋದನೆ ನೀಡುವಂತೆ ಕೋರಿರುತ್ತದೆ.

ಉಲ್ಲೇಖ (3) ರನ್ವಯ ಸರ್ಕಾರವು "ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಹೊಸ ಪೀಳಿಗೆಯ ಉದ್ಯಮಶೀಲರಿಗೆ ಈ ಯೋಜನೆಯಡಿಯಲ್ಲಿ ವಿಸ್ತರಣೆ / ಆಧುನೀಕರಣ / ವೈರುದ್ಧೀಕರಣ / ತಾಂತ್ರಿಕ ಉನ್ನತೀಕರಣ ಮೂಲಕ ಕಟ್ಟಡ ಮತ್ತು ಯಂತ್ರೋಪಕರಣಗಳಲ್ಲಿ ಹೂಡಿಕೆಗಾಗಿ ಸಾಲ ಪಡೆಯುವ ಸ್ಪಷ್ಟೀಕರಣವನ್ನು ನೀಡಿದ್ದು ಅದನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ತಮ್ಮ ವಿಶ್ವಾಸಿ,

ಅಪರ ನಿರ್ದೇಶಕರು (ಎಂಎಸ್‌ಎಂಇ & ಪಿಪಿ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು -560001, ದೂ. 22034320

ಸಂಖ್ಯೆ: ಸಿಐ 20 ಸಪ್ರಕೈ 2018 ದಿನಾಂಕ: 14.03.2019

ಇಂದ:

ಸರ್ಕಾರದ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ,
ಬೆಂಗಳೂರು-1.

ಇವರಿಗೆ:

ಆಯುಕ್ತರು,
ಸೂಕ್ಷ್ಮ,ಸಣ್ಣ ಮತ್ತು ಮಧ್ಯಮ ಕೈಗಾರಿಕೆ ನಿರ್ದೇಶನಾಲಯ,
ಖನಿಜ ಭವನ, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು-1.

ಮಾನ್ಯರೆ,

ವಿಷಯ:- 2018-19ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಘೋಷಿಸಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಕೆ.ಎಸ್.ಎಫ್.ಸಿ. ಮೂಲಕ ಬಡ್ಡಿ ಸಹಾಯಧನ ನೀಡುವ ಹೊಸ ಯೋಜನೆಗೆ ಸ್ಪಷ್ಟೀಕರಣ ನೀಡುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: ಕೈವಾಇ/ಎಂಎಸ್ಎಂಇ/ಕೈ.ವಿ.ಅ1/ಸಧಬಿ/16/18-19 ದಿ: 05.03.2019.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ 2018-19ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 357 ರಲ್ಲಿ ಘೋಷಿಸಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಕೆ.ಎಸ್.ಎಫ್.ಸಿ ಮೂಲಕ ಶೇ 10 ರಷ್ಟು ಬಡ್ಡಿ ಸಹಾಯಧನ ನೀಡುವ ಹೊಸ ಯೋಜನೆಯ ಮಾರ್ಗಸೂಚಿಯ ಕಂಡಿಕೆ 4 ಮತ್ತು 5 ರ ಅಂಶಗಳಿಗೆ ಈ ಕೆಳಕಂಡಂತೆ ಸ್ಪಷ್ಟೀಕರಣಗಳನ್ನು ನೀಡಲಾಗಿದೆಯೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

*"ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಹೊಸ ಪೀಳಿಗೆಯ ಉದ್ಯಮಶೀಲರಿಗೆ ಶೇ 6 ರಷ್ಟು ಬಡ್ಡಿ ಸಹಾಯಧನ ಯೋಜನೆಯು ಈ ಹೊಸ ಯೋಜನೆಯ ಅಧಿಸೂಚನೆ ದಿನಾಂಕದಿಂದ ಸ್ಥಗಿತಗೊಳ್ಳುವುದು. ಆದರೆ ಈಗಾಗಲೇ ಶೇ 6 ರಷ್ಟು ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಸಾಲ ಪಡೆದಿರುವ ಘಟಕಗಳಿಗೆ ಉಳಿದ ಅವಧಿಗೆ ಶೇ 6 ರಷ್ಟೇ ಬಡ್ಡಿ ಸಹಾಯಧನವನ್ನು ನೀಡಲಾಗುವುದು ಹಾಗೂ ಸದರಿ ಸಾಲವನ್ನು ಶೇ 10 ರಷ್ಟು ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ವಿಲೀನಗೊಳಿಸಲು ಅವಕಾಶವಿರುವುದಿಲ್ಲ. ಆದರೆ ಸದರಿ ಘಟಕದವರು ಈ ಯೋಜನೆಯಡಿಯಲ್ಲಿ ವಿಸ್ತರಣೆ/ಆಧುನೀಕರಣ/ವೈರುದ್ಧೀಕರಣ/ತಾಂತ್ರಿಕ ಉನ್ನತೀಕರಣ ಮೂಲಕ ಕಟ್ಟಡ ಮತ್ತು ಯಂತ್ರೋಪಕರಣಗಳಲ್ಲಿ ಹೂಡಿಕೆಗಾಗಿ ಈ ಯೋಜನೆಯ ಆದೇಶದ ನಂತರದ ಹೂಡಿಕೆಗಾಗಿ ಶೇ 10 ರಷ್ಟು ಬಡ್ಡಿ ಸಹಾಯಧನ ಸಾಲ ಪಡೆಯುವ ಅವಕಾಶವಿರುತ್ತದೆ"*

*(ಸರ್ಕಾರದ ಕಾರ್ಯದರ್ಶಿಯವರಿಂದ ಅನುಮೋದಿಸಲ್ಪಟ್ಟಿರುತ್ತದೆ.)*

ತಮ್ಮ ವಿಶ್ವಾಸಿ,

[ಸುಮತಿ.ಎಸ್] 14.3.19
ಸರ್ಕಾರದ ಅಧೀನ ಕಾರ್ಯದರ್ಶಿ[ಸಪ್ರಕೈ],
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.